ವಯಸ್ಸಾದವರು, ಸಾಹಿತಿಯ ಜಾತಿಜನಗಳು, ಅಪರೂಪಕ್ಕೆ ಸಾಹಿತಿಗಳ ಅಭಿಮಾನಿಗಳು ಬರುತ್ತಿದ್ದರು. ಕೆಲವೊಮ್ಮೆ ಇವರೂ ಕೈಕೊಟ್ಟು ಬಿಕೋ ಎನ್ನುತ್ತಿದ್ದ ಸಭಾಂಗಣ ನೋಡಿ ಟಿಎಡಿಎ ಸಾಹಿತಿಗಳ ಪಿತ್ತವೂ ಕೆರಳಿಬಿಡುತ್ತಿತ್ತು.

ತಮ್ಮಲ್ಲಿಗೆ ಭಾಷಣಕ್ಕೆ ಬಂದ ಸಾಹಿತಿಗಳು ಕೆರಳದಂತೆ ಮಾಡಲು ಕಾರ್ಯದರ್ಶಿ ಪಾಟೀಲಪ್ಪ ಹೊಸದೊಂದು ಐಡಿಯಾ ಹುಡುಕಿದ. ಸಂಜೆ ಸಾಹಿತಿಗಳ ಭಾಷಣ ಆರಂಭವಾಗುವ ಮುಂಚೆ, ಬರುವ ಪ್ರೇಕ್ಷಕರೆಲ್ಲರಿಗೂ ಕಾಫಿತಿಂಡಿ ವ್ಯವಸ್ಥೆ ಮಾಡಿದ. ಇದನ್ನು ಆಹ್ವಾನ ಪತ್ರಿಕೆಯಲ್ಲೂ ಪ್ರಕಟಿಸಿದ. ಪಾಟೀಲಪ್ಪನ ಐಡಿಯಾ ಕೈಹಿಡಿಯಿತು. ಪ್ರೇಕ್ಷಕರ ಸಂಖ್ಯೆ ದಿನದಿನಕ್ಕೂ ಏರತೊಡಗಿತು. ಆದರೆ ಬಂದ ಪ್ರೇಕ್ಷಕರು ಗಡದ್ದಾಗಿ ಕಾಫಿತಿಂಡಿ ಮೆದ್ದು ಒಂದಷ್ಟು ಹೊತ್ತು ಸಾಹಿತಿಗಳ ಭಾಷಣ ಕೇಳಿದಂತೆ ಮಾಡಿ ನಿಧಾನಕ್ಕೆ ಜಾಗ ಖಾಲಿ ಮಾಡುತ್ತಿದ್ದರು. ಇದ್ಯಾಕೆ ಹೀಗೆ ಎಂದು ಪ್ರತಿಯೊಬ್ಬ ಪ್ರೇಕ್ಷಕನನ್ನೂ ಮೇಲಿಂದ ಕೆಳತನಕ ನೋಡಿದ ಪಾಟೀಲಪ್ಪನಿಗೆ ಕಾಫಿತಿಂಡಿ ಪ್ರೇಕ್ಷಕರಲ್ಲಿ ಕೆಲವು ಹಮಾಲಿಗಳೂ, ಪ್ಲಾಸ್ಟಿಕ್ ಕವರುಗಳನ್ನು ಆಯುವ ಅಲೆಮಾರಿಗಳೂ ಇರುವುದನ್ನು ಕಂಡು ಮೈ ಉರಿದು ಹೋಯಿತು. ಆದರೆ ಕನ್ನಡ ಸಂಘ ಆರಂಭವಾದ ಲಾಗಾಯ್ತಿನಿಂದಲೂ ಸಭಾಂಗಣದ ಕಾಂಪೌಂಡಿನ ಒಳಗಿದ್ದ ನಲ್ಲಿಯಲ್ಲಿ ಹಮಾಲಿಗಳು ನೀರು ಕುಡಿಯುವುದನ್ನೂ, ಕೆಲವೊಮ್ಮೆ ಸ್ನಾನ ಮಾಡುತ್ತಿದ್ದುದನ್ನೂ ತಾನು ಅಧಿಕಾರಕ್ಕೆ ಬಂದ ಸ್ವಲ್ಪ ದಿನಗಳಲ್ಲೇ, ಸಂಘದ ತಿಂಗಳ ಮೀಟಿಂಗಿನಲ್ಲಿ ತಲೆಹರಟೆ ನಿರ್ದೇಶಕ ಗುರ್ಲಿಂಗ ವಿರೋಧಿಸಿದ್ದರೂ ಆ ನಲ್ಲಿಯ ಸಂಪರ್ಕವನ್ನೇ ಕಡಿಸಿ ಹಾಕಿ ಸಭಾಂಗಣದ ಪಾವಿತ್ರ್ಯ ರಕ್ಷಿಸಿದ್ದ ಪಾಟೀಲಪ್ಪನಿಗೆ ಈ ಪುಕ್ಕಟೆ ಗಿರಾಕಿಗಳು ಕಾಫಿತಿಂಡಿ ಕಬಳಿಸುವುದನ್ನು ನಿಲ್ಲಿಸುವುದು ಕಷ್ಟದ ಸಂಗತಿಯೇನೂ ಆಗಿರಲಿಲ್ಲ. ಮುಂದೆ ಭಾಷಣವಿದ್ದ ದಿನಗಳಲ್ಲೆಲ್ಲ ಶಿವಪ್ಪನನ್ನು ಸಭಾಂಗಣದ ಬಾಗಿಲಲ್ಲೇ ನಿಲ್ಲಿಸಿ ಅವರನ್ನು ಹೊರಗಟ್ಟುವಂತೆ ಮಾಡಿದ. ದುರದೃಷ್ಟವಶಾತ್ ಇದರಿಂದ ಸಾಹಿತಿಗಳ ಭಾಷಣ ಕೇಳುವ ಪ್ರೇಕ್ಷಕರ ಸಂಖ್ಯೆಯೇ ಇಳಿಮುಖವಾಗಿ ಉಪಯೋಗಕ್ಕೆ ಬರದ ಕಾಫಿತಿಂಡಿ ವ್ಯವಸ್ಥೆಯನ್ನೇ ಬರ್ಖಾಸ್ತು ಮಾಡಬೇಕಾಯಿತು.

ಬಸವಾಪುರಕ್ಕೆ ಆಗಷ್ಟೇ ಐಪಿಎಸ್ಸು ಪಾಸು ಮಾಡಿ ಎಸ್ಪಿಯಾಗಿ ಬಂದಿದ್ದ ಬಸಣ್ಣ ತಾನು ಬಂದ ಹೊತ್ತಿನಲ್ಲೇ ಸಿಕ್ಕ, ಗ್ರಂಥ ಭಂಡಾರ ಸುಟ್ಟ ಕೇಸಿನಿಂದ ಥ್ರಿಲ್ಲಾಗಿ ಘಟನೆಯಿಂದ ಶಾಕ್ ಆದವನ ತರ, ಸರಸ್ವತಿದ್ರೋಹಿಗಳನ್ನು ಒಂದೆರೆಡು ದಿನಗಳಲ್ಲಿ ಹಿಡಿದು ಸದೆಬಡಿಯುವ ಹುಮ್ಮಸ್ಸು ತೋರುವ ಸಮ್ಮಿಶ್ರ ಭಾವಗಳನ್ನು ಮುಖದಲ್ಲಿ ತಂದುಕೊಂಡು ಕನ್ನಡ ಸಂಘದ ಮುಂದೆ ಆಗಲೇ ಸುಟ್ಟ ಪುಸ್ತಕಗಳಿಂದ ಸುರುಸುರುಳಿಯಾಗಿ ಹರಿದಾಡುತ್ತಿದ್ದ ಹೊಗೆಯ ಮನಮೋಹಕ ಬ್ಯಾಕ್‌ಗ್ರೌಂಡಿನಲ್ಲಿ ಶೂಟಿಂಗಿಗೆ ರೆಡಿಯಾಗಿ ಬ್ರೇಕಿಂಗ್ ನ್ಯೂಸನ್ನು ಬಿತ್ತರಿಸಲು ತುದಿಗಾಲಲ್ಲಿ ನಿಂತಿದ್ದ ಟೀವಿ ಚಾನಲ್ಲುಗಳ ರಿಪೋರ್ಟರುಗಳನ್ನು ಎದುರುಗೊಂಡ.

ರಿಪೋರ್ಟರುಗಳ ಮುಂದೆ ಏನೆಲ್ಲಾ ವದರಾಡಿದ್ದರೂ ಕನ್ನಡ ಸಂಘದ ಗ್ರಂಥ ಭಂಡಾರಕ್ಕೆ ಬೆಂಕಿ ಕೊಡುವ ಕಾರಣವೇನಿತ್ತು ಎಂಬುದು ಕಚೇರಿಗೆ ಬಂದು ಕುಳಿತ ಎಸ್ಪಿ ಬಸಣ್ಣನ ತಲೆ ತಿನ್ನತೊಡಗಿತು. ಬಸಣ್ಣ ಹೀಗೆ ತಲೆಕೆಡಿಸಿಕೊಳ್ಳುವ ಹೊತ್ತಿಗೆ ಜವಾನ ಹೊತ್ತು ತಂದುಕೊಟ್ಟ ಅನಾಮಧೇಯ ಕವರೊಂದು ಬೆಂಕಿ ಕೊಟ್ಟವನ ಸುಳಿವನ್ನು ನೀಡಿಬಿಟ್ಟಿತು.

ಬಸಣ್ಣನಿಗೆ ಬಂದ ಕವರಿನಲ್ಲಿ, 'ಸಂಘದಲ್ಲಿ ಇಷ್ಟೆಲ್ಲಾ ಅನಾಚಾರ ನಡೆಯುತ್ತಿದ್ದರೂ ಎಲ್ಲರೂ ಸುಮ್ಮನಿರುವುದಾದರೆ ಇಲ್ಲಿರುವ ಸಾವಿರಾರು ಪುಸ್ತಕಗಳಿಂದ ಏನು ಪ್ರಯೋಜನ? ಅದಕ್ಕೆ ನಾನೇ ಕೈಯಾರೆ ಬೆಂಕಿ ಕೊಟ್ಟುಬಿಡುತ್ತೇನೆ' ಎಂದು ಗುರ್ಲಿಂಗ ಕನ್ನಡ ಸಂಘದ ಅಧ್ಯಕ್ಷರಿಗೆ ಬರೆದಿದ್ದ ಬೆದರಿಕೆ ಪತ್ರದ ಜೆರಾಕ್ಸ್ ಪ್ರತಿಯಿತ್ತು. ಬಸಣ್ಣನಿಗೆ ಕವರ್ ಬಂದ ನಂತರ ಕಲೆ ಹಾಕಿದ ಮಾಹಿತಿಗಳಂತೆ ಗುರ್ಲಿಂಗನನ್ನು ಆತ ಈ ಪತ್ರ ಬರೆದ ವಾರಕ್ಕೆಲ್ಲಾ ಬಸವಾಪುರ ಜಿಲ್ಲಾ ಸಹಕಾರ ಬ್ಯಾಂಕಿನ ಗುಮಾಸ್ತನ ಹುದ್ದೆಯಿಂದ ತೆಗೆದು ಹಾಕಲಾಗಿತ್ತು. ಆ ಬ್ಯಾಂಕಿನ ಅಧ್ಯಕ್ಷನೇ ಕನ್ನಡ ಸಂಘದ ಅಧ್ಯಕ್ಷನೂ ಆಗಿದ್ದು, ಅಧ್ಯಕ್ಷನ ಮೇಲಿನ ಸಿಟ್ಟಿಗೆ ಗುರ್ಲಿಂಗ ಹೀಗೆ ಮಾಡಿದ ಎಂದು ಬಸಣ್ಣ ತೀರ್ಮಾನಕ್ಕೆ ಬಂದು ಆತನನ್ನು ಎತ್ತಾಕಿಕೊಂಡು ಬರುವಂತೆ ಪೋಲೀಸರಿಗೆ ಆರ್ಡರ್ ಮಾಡಿದ. ಆ ಹೊತ್ತಿಗೆ ಯಾಕೋ ಜ್ವರದಿಂದ ಹಾಸಿಗೆ ಹಿಡಿದಿದ್ದ ಗುರ್ಲಿಂಗ ಬರುವ ಸ್ಥಿತಿಯಲ್ಲಿರದಿದ್ದರೂ ಸಾಹೇಬರ